
ಕಾಲಘಟ್ಟವೂ ಹೌದು. ಆದರೆ ಭಾರತದಲ್ಲಿ ಈ ಹದಿಹರೆಯದ ಪ್ರಣಯದ ಮೇಲೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಭಾವ ಹಾಗೂ ಹಿಡಿತ ತುಸು ಹೆಚ್ಚೇ ಇರುತ್ತದೆ' ಎಂದು ಹೇಳುತ್ತಾರೆ ಮಂಗಳೂರಿನಲ್ಲಿ ಮನೋವೈದ್ಯೆಯಾಗಿರುವ ಡಾ. ಅರುಣಾ ಯಡಿಯಾಳ್.

'ಪೋಕ್ಸೊ ಕಾಯಿದೆ 2012ರ ಪ್ರಕಾರ, ಅಪ್ರಾಪ್ತ ವಯಸ್ಸಿನ ಎಂದರೆ 18ರ ಕೆಳಗಿನ ಮಕ್ಕಳ ಯಾವುದೇ ರೀತಿಯ ಲೈಂಗಿಕ ಕ್ರಿಯೆ ಅಪರಾಧವೆನಿಸಿಕೊಳ್ಳುತ್ತದೆ. ಇದು ಬಾಲ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಮಾಡಿರುವ ಕಾಯ್ದೆಯಾದರೂ ಅದೂ ಇಂದು ಹದಿಹರೆಯದವರ ಸ್ವ–ಇಚ್ಛೆಯಿಂದ ಕೂಡಿದ ಲೈಂಗಿಕಾಭಿರುಚಿಗಳಿಗೆ, ಆಸೆಗಳಿಗೆ ಕಂಟಕಪ್ರಾಯವಾಗಿ ಮೂಡಿಬಂದಿದೆ. 16–18 ವರ್ಷಗಳ ನಡುವಿನ ಹದಿಹರೆಯದವರು ತಮ್ಮ ಸ್ವ ಇಚ್ಛೆಯಿಂದ ಲೈಂಗಿಕವಾಗಿ ಸಕ್ರಿಯವಾಗಿದ್ದರೆ ಅದು ತಪ್ಪಲ್ಲ ಎಂದು ಮನೋವಿಜ್ಞಾನ ಹೇಳುತ್ತದೆ. ಆದರೆ ಇದು ಕಾನೂನು ಸಮಾಜ ಹಾಗೂ ಸಂಸ್ಕೃತಿಯು ಹಾಕಬಯಸುವ ಲಕ್ಷ್ಮಣ ರೇಖೆಯನ್ನು ಉಲ್ಲಂಘಿಸಿದಂತೆಯೂ ಆಗುತ್ತದೆ. ಈ ಲಕ್ಷ್ಮಣರೇಖೆ ಹಾಕಿರುವುದು ತಪ್ಪೇ? ಮೋಹ ಎಂಬ ಮರೀಚಿಕೆಗೆ ಮರುಳಾಗಿ ಈ ಲಕ್ಷ್ಮಣ ರೇಖೆಯನ್ನು ದಾಟಿಹೋಗುವುದು ತಪ್ಪೇ? ಈ ಸರಿ–ತಪ್ಪುಗಳ ವಿಶ್ಲೇಷಣೆಯೇ ಇಂದು ವಿವಾದಾತ್ಮಕವಾಗಿ ಪರಿಣಮಿಸಿದೆ ಸದ್ಯಕ್ಕಂತೂ ಈ ಲಕ್ಷಣರೇಖೆ ಹದಿನೆಂಟು ವಯಸ್ಸಿನವರೆಗೆ ಇರುವುದಂತೂ ನಿಜ. ಈ ರೇಖೆ ದಾಟಿ ಹೋದರೆ ರಾಮಾಯಣ ಆಗುವುದೂ ದಿಟ' ಎನ್ನುತ್ತಾರೆ ಅವರು.

### ಹೆಣ್ಣು ದೈಹಿಕವಾಗಿ ಸಿದ್ಧರಾಗಿರಲ್ಲ...

ಹದಿಹರೆಯದ ಹೆಣ್ಣುಮಗಳು ಗರ್ಭವತಿಯಾದರೆ ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹಳ್ಳಿಗಳಲ್ಲಿರುವ ಎಷ್ಟೋ ಕುಟುಂಬಗಳಲ್ಲಿ ಹದಿನೆಂಟಕ್ಕೂ ಮೊದಲೇ ಮದುವೆ ಮಾಡುವುದು ಇದೆ. ಇದು ಕಾನೂನು ಬಾಹಿರ. ಅಲ್ಲದೆ ಈ ಹುಡುಗಿ ಹದಿನೆಂಟರ ಮುನ್ನವೇ ಗರ್ಭ ಧರಿಸಿ ಹೆರಿಗೆಗಾಗಿ ಆಸ್ಪತ್ರೆಗೆ ಬರುತ್ತಾಳೆ. ಆದರೆ ಬಹುತೇಕ ಹೆಣ್ಣುಮಕ್ಕಳ ದೇಹ ಹೆರಲು ಸಿದ್ಧವಾಗಿರುವುದಿಲ್ಲ. ಇದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ' ಎಂದು ಹೇಳುತ್ತಾರೆ





ಬೆಂಗಳೂರಿನ ರಾಧಾಕೃಷ್ಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆಯಾಗಿರುವ ಡಾ. ವಿದ್ಯಾ ಭಟ್.

'ಹದಿಹರೆಯ ಎಂಬುದು ದೈಹಿಕ, ಮಾನಸಿಕ, ಭಾವನಾತ್ಮಕ ಬದಲಾವಣೆಗಳ ಸಂಕ್ರಮಣ ಕಾಲ. ಅಪೌಷ್ಟಿಕತೆ ಹದಿಹರೆಯದ ಹುಡುಗಿಯರನ್ನು ಕಾಡುತ್ತಿರುವ ಸಾಮಾನ್ಯ ಸಮಸ್ಯೆ. ಮಾಸಿಕ ಋತುಸ್ರಾವದ ಸಂದರ್ಭದಲ್ಲಿ ಹದಿಹರೆಯದ ಹೆಣ್ಣುಮಕ್ಕಳು ಮುಜುಗರಕ್ಕೊಳಗಾಗಿ ಶುಚಿತ್ವ ಕಾಪಾಡಿಕೊಳ್ಳದೆ ಅನಾರೋಗ್ಯಕ್ಕೆ ತುತ್ತಾಗುವ ಪ್ರಸಂಗಗಳು ವೈದ್ಯರ ಬಳಿ ಇವೆ. ಮುಟ್ಟಾಗುವ ಸಮಯದಲ್ಲಿ ಹೆತ್ತವರು ತಮ್ಮ ಮಕ್ಕಳಿಗೆ ನೈರ್ಮಲ್ಯದ ಪಾಠವನ್ನು ಕಲಿಸಿಕೊಡಬೇಕಾಗಿದೆ' ಎಂಬುದು ಅವರ ನಿಲುವು.

'ಕೆಲವು ಹುಡುಗಿಯರಿಗೆ ಮೆನಾರ್ಕೆಯೇ (ಮೊದಲ ಮುಟ್ಟು) ತಡವಾಗಿ ಆಗಿರುತ್ತದೆ. ಮೂಳೆಗಳು ಸದೃಢವಾಗಿರಲ್ಲ. ಇಂಥ ಹುಡುಗಿಯರು ಗರ್ಭಿಣಿಯಾದರೆ ದೈಹಿಕವಾಗಿ ಮಾತ್ರವಲ್ಲ, ಮಾನಸಿಕ, ಸಾಮಾಜಿಕವಾಗಿಯೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ ಹದಿನೆಂಟು ವರ್ಷಕ್ಕೆ ಮೊದಲೇ ಗರ್ಭಿಣಿಯಾದವರಿಗೆ ಬಿಪಿ ಹೆಚ್ಚಾಗುವ ಸಾಧ್ಯತೆ ಇದೆ. ಕೈಕಾಲುಗಳಲ್ಲಿ ಊತ ಬರುತ್ತದೆ. ಮಗುವಾದ ಬಳಿಕ 'ಬಾಣಂತಿ ಸನ್ನಿ' ಎದುರಾಗುವ ಅಪಾಯವೂ ಇದೆ' ಎನ್ನುತ್ತಾರೆ ಡಾ. ವಿದ್ಯಾ.

ಕೆಲ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ಹದಿನೆಂಟಕ್ಕೆ ಮುನ್ನವೇ ಗರ್ಭ ಧರಿಸಿದ ಪರಿಣಾಮ ಸಾವನ್ನಪ್ಪಿರುವ ಘಟನೆಗಳೂ ಇವೆ. ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯದ ವಿಷಯದಲ್ಲಿ ಜೀವಕ್ಕೆ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತದೆ.

### ಲೈಂಗಿಕತೆಯ ಬೆಳವಣಿಗೆ

ಸಾಮಾನ್ಯವಾಗಿ ಹುಡುಗ ಮತ್ತು ಹುಡುಗಿ ಹದಿಹರೆಯಕ್ಕೆ ಕಾಲಿಟ್ಟ ಮೇಲೆ ಪ್ರೌಢಾವಸ್ಥೆಯಲ್ಲಿ ಲೈಂಗಿಕತೆಯೂ ಆರಂಭವಾಗುತ್ತದೆ. ಲೈಂಗಿಕ ನಡವಳಿಕೆಯು ಹೈಪೊಥಲಾಮಸ್ ಮತ್ತು ಪಿಟ್ಯುಟರಿ ಗ್ರಂಥಿಗಳ ಹಾರ್ಮೋನ್‌ಗಳ ಸ್ರವಿಸುವಿಕೆಯಿಂದಲೇ ಆರಂಭವಾಗುವುದು. ಆ್ಯಂಡ್ರೋಜನ್ ಹಾಗೂ ಈಸ್ಟ್ರೋಜನ್ ಹಾರ್ಮೋನ್‌ಗಳ ಸ್ರವಿಸುವಿಕೆ ಪ್ರಕ್ರಿಯೆ ತನ್ನ ಕ್ಷಮತೆಯನ್ನು ಆರಂಭಿಸುವುದು ಇದೇ ಹರೆಯದಲ್ಲಿ.

ಈಗೀಗ ಹದಿಹರೆಯದ ಮಕ್ಕಳು ಲೈಂಗಿಕ ಚಟುವಟಿಕೆಯಲ್ಲಿ ಹೆಚ್ಚು ಆಸಕ್ತಿವಹಿಸುತ್ತಿದ್ದಾರೆ ಎನ್ನುತ್ತದೆ ಒಂದು ಅಧ್ಯಯನ. ಇದರಿಂದ ಎಚ್‌ಐವಿ–ಏಡ್ಸ್ ಪ್ರಕರಣಗಳೂ ಹೆಚ್ಚಾಗುತ್ತಿವೆ. ಹದಿಹರೆಯದವರಲ್ಲಿ ಲೈಂಗಿಕವಾಗಿ ಹರಡುವ ಸೋಂಕುಗಳು ಅತಿ ಹೆಚ್ಚು. ಅಲ್ಲದೆ ಹದಿವಯಸ್ಸಿನ ಗರ್ಭಧಾರಣೆ ಹಾಗೂ ಗರ್ಭಪಾತಗಳ ಸಂಖ್ಯೆಯೂ ಹೆಚ್ಚುತ್ತಿದ್ದು ಮಕ್ಕಳ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತದೆ ಎಂಬುದು ವೈದ್ಯಲೋಕದ ಕಳವಳ.

### ತೀವ್ರ ದೈಹಿಕ ಬದಲಾವಣೆ

ಗಂಡು ಹೆಣ್ಣು ಇಬ್ಬರಲ್ಲೂ ತೀವ್ರತರ ದೈಹಿಕ–ಮಾನಸಿಕ ಬದಲಾವಣೆಗಳಾಗುತ್ತವೆ. ವಿಶ್ವ ಆರೋಗ್ಯ ಸಂಸ್ಥೆಯು ಹದಿಹರೆಯವನ್ನು (11–19ರ ವಯಸ್ಸು) ತೀವ್ರ ದೈಹಿಕ ಬದಲಾವಣೆಗಳು ಕಂಡುಬರುವ ಹಂತ ಎಂದು ಹೇಳಿದೆ.

ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಗುವುದು ಇದೇ ವಯಸ್ಸಿನಲ್ಲಿ, ಇಂದಿನ ಬದಲಾದ ಜೀವನಶೈಲಿಯಿಂದ ಹದಿಹರೆಯದ ಮಕ್ಕಳು ಬೊಜ್ಜು, ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ, ಜೊತೆಗೆ ಧೂಮಪಾನ, ಮದ್ಯಪಾನ, ಮಾದಕ ವಸ್ತುಗಳ ಸೇವನೆ ಮುಂತಾದ ಅಭ್ಯಾಸಗಳನ್ನು ರೂಢಿಸಿಕೊಂಡು ಮೋಜು–ಮಸ್ತಿ ಮಾಡುವುದರಿಂದಲೂ ದೈಹಿಕ, ಮಾನಸಿಕ ಸ್ವಾಸ್ಥ್ಯದ ಜೊತೆಗೆ ಸಾಮಾಜಿಕ ಸೌಹಾರ್ದವೂ ಹದಗೆಡುವ ಅಪಾಯ ಇದೆ. ಪೋಷಕರು ಹದಿಹರೆಯದ ಮಕ್ಕಳನ್ನು ಸೂಕ್ತ ಹಾದಿಯಲ್ಲಿ ನಡೆಯುವಂತೆ ಎಚ್ಚರಿಕೆಯಿಂದ ಮುನ್ನಡೆಸುವ ಅಗತ್ಯ ಇದೆ.